


ಬಿಜಲಾನಿ ಎಂಬ ನಟಿ ಒಂದೇ ಒಂದು ಸಿನಿಮಾ ಕೈಯಲ್ಲಿ ಇರದಿದ್ದರೂ ವಾಷಿಂಗ್ ಪೌಡರ್ ನಿರ್ಮಾದಲ್ಲಿ ವರ್ಷಾನುಗಟ್ಟಳೆ ಮಿಂಚಿದ್ದು ನೆನಪಿಸಿಕೊಳ್ಳಿ! ರಣಬೀರ್ ಕಪೂರ್ ಚಿಕ್ಕಂದಿನಿಂದಲೂ ಜಾಹೀರಾತುಗಳಲ್ಲಿ ನಟಿಸಿದವನು, ಯುವಕನಾಗಿ ಮೊದಲ ಸಿನಿಮಾಕ್ಕೆ ಮೈಲೇಜ್ ತೆಗೆದುಕೊಳ್ಳಲೂ ಜಾಹೀರಾತುಗಳು ನೆರವಾದದ್ದನ್ನು ನೆನಪಿಸಿಕೊಳ್ಳಿ.)

ಹಿಂದೆಲ್ಲಾ ಭಾರತೀಯ ಚಿತ್ರರಂಗದಲ್ಲಿ ಹೀಗಿರಲಿಲ್ಲ. ಯಾವುದೇ ನಟ–ನಟಿಯಾದರೂ ಆತ/ ಆಕೆ ಸಿನಿಮಾವೊಂದರಲ್ಲಿ ನಿರ್ವಹಿಸಿದ ಪಾತ್ರವೊಂದರಿಂದ ಗುರುತಿಸಿಕೊಳ್ಳುತ್ತಿದ್ದ. ನರ್ಗಿಸ್ ದತ್ ಅಂದಾಕ್ಷಣ ನಮಗೆ ನೆನಪಾಗುವುದು 'ಮದರ್ ಇಂಡಿಯಾ' ಎಂಬ ಸಿನಿಮಾ. ಹಾಗೆಯೇ ಅಮಿತಾಭ್ ಬಚ್ಚನ್ ಎಂದಾಗ 'ದೀವಾರ್', ಅಮ್ಜದ್ ಖಾನ್ ಎಂದಾಗ 'ಶೋಲೆ'. ಇವತ್ತಿಗೂ ಬಾಬ್ಬಿ ಚಿತ್ರದ ಹೆಸರಿನಲ್ಲೇ ರಿಷಿ ಕಪೂರ್ ಮತ್ತು ಡಿಂಪಲ್ ಕಪಾಡಿಯಾ ನೆನಪಾಗುತ್ತಾರೆ.




ಆದರೆ ಇತ್ತೀಚಿನ ವರ್ಷಗಳಲ್ಲಿ ಯಾವುದೇ ನಟ/ ನಟಿಯರಿಗೆ ಅಂತಹ ಪಾತ್ರಗಳು ಸಿಗುತ್ತಿಲ್ಲ. ಈಗ ಯಾವ ರೀತಿಯ ಪಾತ್ರಗಳಲ್ಲಿ ನಟಿಸಲೂ ನಟ/ ನಟಿಯರು ಸಿದ್ಧರಿರುತ್ತಾರೆ. ಹಾಗಾಗಿ ಸಿನಿಮಾ ಹೊರತಾಗಿಯೂ ಪ್ರಚಾರದಲ್ಲಿ ಇರಲು ಅನೇಕ ದಾರಿಗಳನ್ನು ಈ ನಟ/ ನಟಿಯರು ಹುಡುಕಿಕೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾದದ್ದು ಜಾಹೀರಾತು ಚಿತ್ರಗಳು ಮತ್ತು ಸಾಮಾಜಿಕ ಜಾಲತಾಣ.

ಹಾಗೆ ನೋಡಿದರೆ ಹಿಂದಿ ತಾರೆಯರಿಗೂ ಜಾಹೀರಾತಿಗೂ ನಂಟು ಈಗಿನದ್ದಲ್ಲ. ಹಿಂದಿಯ ಅಂದ ಕಾಲತ್ತಿಲ್ ಜನಪ್ರಿಯ ತಾರೆ ಲೀಲಾ ಚಿಟ್ನೀಸ್ 1941ರಲ್ಲೇ ಲಕ್ಸ್ ಟಾಯ್ಲೆಟ್ ಸೋಪ್‌ನ ಜಾಹೀರಾತುಗಳಲ್ಲಿ ಕಾಣಿಸಿಕೊಂಡಿದ್ದರು. ಕಾಲಕ್ರಮೇಣ ಚಿತ್ರತಾರೆಯರ ಈ ಸೌಂದರ್ಯ ಸಾಬೂನಿನ ಜಾಹೀರಾತುಗಳಲ್ಲಿ ಝೀನತ್ ಅಮಾನ್, ಶ್ರೀದೇವಿ, ಮಾಧುರಿ ದೀಕ್ಷಿತ್, ದೀಪಿಕಾ ಪಡುಕೋಣೆ ಎಲ್ಲರೂ ಕಾಣಿಸಿಕೊಂಡಿದ್ದಾರೆ. 80ರ ದಶಕದ ಬಳಿಕ ಚಿತ್ರತಾರೆಯರು ಜಾಹೀರಾತುಗಳಲ್ಲಿ ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿದರು. ಪ್ರೆಸ್ಟೀಜ್ ಪ್ರೆಶರ್ ಕುಕ್ಕರ್‌ನ ಜಾಹೀರಾತಿನಲ್ಲಿ ನಟಿ ತಬಸ್ಸುಂ, ಪಾನ್ ಪರಾಗ್ ಜಾಹೀರಾತಿನಲ್ಲಿ ಜಲಾಲ್ ಆಗಾ ಮುಂತಾದವರು ಜನಪ್ರಿಯರಾದದ್ದನ್ನು ಹಳಬರು ಈಗಲೂ ನೆನಪಿಸಿಕೊಳ್ಳುತ್ತಾರೆ. 80ರ ದಶಕದ ಆರಂಭದಲ್ಲಿ ಭಾರತೀಯ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದ ಬಳಿಕ ತಂಡ ನಾಯಕ ಕಪಿಲ್‌ದೇವ್ ಕೂಡಾ ಜಾಹೀರಾತು ಕಂಪೆನಿಗಳ ಕಣ್ಮಣಿಯಾದರು. ಅವರು ಮಾಡೆಲ್ ಆಗಿದ್ದ ಪಾಲ್ಮೊಲಿವ್ ಶೇವಿಂಗ್ ಕ್ರೀಮ್ ಒಮ್ಮಿಂದೊಮ್ಮೆಲೆ ತಮ್ಮ ಮಾರಾಟವನ್ನು ಹೆಚ್ಚಿಸಿಕೊಂಡಿತ್ತು.

ಈಗಲಂತೂ ಯಾವುದೇ ಹೊಸ ಉತ್ಪನ್ನಗಳು ಬರಲಿ, ಅದರ ಜಾಹೀರಾತಿಗೆ ಸೆಲೆಬ್ರಿಟಿಗಳು ಇರಲೇಬೇಕು. ಒಂದು ಅಂಕಿ ಅಂಶದ ಪ್ರಕಾರ, 2007ರಲ್ಲಿ ಭಾರತದ 665 ಮಂದಿ ಸೆಲೆಬ್ರಿಟಿಗಳು ವಿವಿಧ ಕಂಪೆನಿಗಳ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದರು. ಆದರೆ 2017ರಲ್ಲಿ ಹೀಗೆ ಜಾಹೀರಾತಿನಲ್ಲಿ ಕಾಣಿಸಿಕೊಳ್ಳುವ ಸೆಲೆಬ್ರಿಟಿಗಳ ಸಂಖ್ಯೆ 1660ಕ್ಕೆ ಏರಿದೆ! ಸಿನಿಮಾ ಜತೆಗೆ ಟಿವಿ ನಟ– ನಟಿಯರೂ ಜಾಹೀರಾತಿನಲ್ಲಿ ನಟಿಸಲು ಕ್ಯೂ ನಿಂತಿದ್ದಾರೆ. ಕ್ರೀಡಾಪಟುಗಳಿಗೂ ಇತ್ತೀಚೆಗೆ ಭಾರೀ ಬೇಡಿಕೆ ಬಂದಿದೆ. ಮೈ,ಕೈ, ಮುಖಕ್ಕೆ